**ಕರ್ನಾಟಕ ಸರ್ಕಾರ**

**ರಾಷ್ಟ್ರೀಯ ಸೇವಾ ಯೋಜನೆ**

ಸಂಖ್ಯೆ:ರಾಸೇಯೋ:ಪಪೂಶಿ/03/2019

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18 ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ:30/07/2019

<u>ಸುತ್ತೋಲೆ</u>

ವಿಷಯ:- ರಾಷ್ಟ್ರೀಯ ಸೇವಾ ಯೋಜನೆಯ 50ನೇ ವರ್ಷದ ಸುವರ್ಣೋತ್ಸವದ ಅಂಗವಾಗಿ ಎನ್.ಎಸ್.ಎಸ್ ಘಟಕಗಳಲ್ಲಿ ಯಶಸ್ವಿ ಕಥೆಗಳ ಪ್ರಕಟಣೆಗಳ ಬಗ್ಗೆ.

ಉಲ್ಲೇಖ: ಸಂಖ್ಯೆ:ಯುಸೇಇ/ರಾಸೇಯೋ/37/2019-20/224 ದಿನಾಂಕ: 29/07/2019

***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ 2019-20ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಕಾಲೇಜುಗಳು ಕಳೆದ 50 ವರ್ಷಗಳಲ್ಲಿ ನಿರ್ಮಿಸಿದ ಕಾರ್ಯಗಳ ಬಗ್ಗೆ ಒಂದು ಪುಟ ಮೀರದಂತೆ ಯೋಜನೆಯ ಹಿನ್ನಲೆ ಅನುಷ್ಠಾನ, ಯಶಸ್ಸು ಇತ್ಯಾದಿಗಳ ಬಗ್ಗೆ ಬರೆದು, ಕಳುಹಿಸುವುದು.

ಸದರಿಯವರು ಘಟಕದಲ್ಲಿ ಕಾರ್ಯ ನಿರ್ವಹಿಸಿರುವ ಶೌಚಾಲಯ-ಮನೆ ನಿರ್ಮಾಣ, ಕಾಂಪೌಂಡ್, ಹೊಸ ಕ್ರೀಡಾಂಗಣ ನಿರ್ಮಾಣ, ಇತರೆ ನಿರ್ಮಾಣಗಳನ್ನು ಕೆರೆಹೂಳೆತ್ತುವಿಕೆ ಪುನರ್ ನಿರ್ಮಾಣ, ನಿರಂತರ ಅರಿವು ಕಾರ್ಯಕ್ರಮವನ್ನು, ನಿರಂತರ ತರಬೇತಿ ಕಾರ್ಯಕ್ರಮ ಹೀಗೆ ಫಲಾನುಭವಿಗಳ ವಿವರಗಳೊಂದಿಗೆ ಯಶಸ್ವಿ ಕಥೆಗಳನ್ನು ಕಳುಹಿಸುವುದು. ತಾವು ಕಳುಹಿಸುವ ಯಶಸ್ಸಿನ ಕಥೆಗಳು ಈ ಕೆಳಕಂಡಂತಿರಲ್ಲಿ.

1. ನಿರೂಪಣೆ ರಸವತ್ತಾಗಿರಲಿ ಅನುಭವ ಯುಕ್ತವಾಗಿರಲಿ, ಸಂಖ್ಯಾ ವಿವರವಾಗಿರಲಿ.
2. ಒಂದು ಪುಟಕ್ಕೆ ಮೀರದಿರಲಿ.
3. ಒಂದು ಛಾಯಾ ಚಿತ್ರ ಇದ್ದರೆ ಉತ್ತಮ(ಅನಿವಾರ್ಯವಲ್ಲ)
4. ಹಿಂದಿನ ಸಂಯೋಜನಾಧಿಕಾರಿಗಳು, ಪ್ರಾಂಶುಪಾಲರು, ಯೋಜನಾಧಿಕಾರಿಗಳು ಮತ್ತು ಸ್ವಯಂ ಸೇವಕರಿಂದ ಸಂಗ್ರಹಿಸಿ ಕಳುಹಿಸಬಹುದು.
5. ಇದು ಅತ್ಯುತ್ತಮ ದಾಖಲಾತಿಯಾದುದರಿಂದ ಕಳೆದ 50 ವರ್ಷಗಳು ನಿರ್ದೇಶನಾಲಯಗಳ ವ್ಯಾಪ್ತಿಯ ಮಹತ್ವದ ಕಾರ್ಯಗಳು ಬಿಟ್ಟು ಹೋಗದಂತೆ ಕಳುಹಿಸಬೇಕು.

ಈ ಸಂಬಂಧ ಪಟ್ಟ ಯಶಸ್ವಿ ಕಥೆಗಳ ವಿವರಗಳನ್ನು ಆಗಸ್ಟ್ 12 2019ರೊಳಗೆ ತಲುಪುವಂತೆ ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560012 ಹಾಗೂ **gayathrireddynss@gmail.com** ಗೆ ಕಳುಹಿಸುವುದು.

ವಿ.ಸೂ: ರಾಜ್ಯ ಸರ್ಕಾರದ ಪರ್ವಾ ಸಂಚಿಕೆ ಪತ್ರವನ್ನು ಲಗತ್ತಿಸಿದೆ.

ತಮ್ಮ ವಿಶ್ವಾಸಿ

(ಶ್ರೀಮತಿ ಗಾಯತ್ರಿ ರೆಡ್ಡಿ ಪಿ.ಆರ್)
ರಾಜ್ಯ ಸಂಯೋಜನಾಧಿಕಾರಿಗಳು
ರಾಷ್ಟ್ರೀಯಸೇವಾ ಯೋಜನೆ
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ, ಬೆಂಗಳೂರು.

ಪ್ರತಿ:

1. ಸಂಬಂಧ ಪಟ್ಟ ಜಿಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು.
2. ಸಹಾಯಕ ನಿರ್ದೇಶಕರು, ಇ ಗವರ್ನೆನ್ಸ್ ರವರಿಗೆ ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಕಛೇರಿ ಪ್ರತಿ.